ಕರ್ನಾಟಕ ವಿಧಾನ ಸಭೆ ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಶಾಖೆ / ವಿಷಯ: DEPARTMENT / SUBJECT: ವಿಧಾನ ಸಭಾಧ್ಯಕ್ಷರು

ಪತ್ರಿಕೆಯ ಹೆಸರು : NAME OF THE NEWS PAPER : ವಿಜಯವಾಣಿ    ದಿನಾಂಕ : DATE : 04/06/2019

# ಸ್ಪೀಕರ್- ಸಿಎಂ ಚರ್ಚೆ

ಬೆಂಗಳೂರು: ಸಿಎಂ ಎಚ್.ಡಿ.ಕುಮಾರಸ್ವಾಮಿ, ಸ್ಪೀಕರ್ ರಮೇಶ್‌ಕುಮಾರ್ ಸೋಮವಾರ ವಿವಿಧ ವಿಚಾರಗಳ ಬಗ್ಗೆ ಚರ್ಚೆ ನಡೆಸಿದರು. ವಿಧಾನಸೌಧದ ಮೊದಲ ಮಹಡಿಯಲ್ಲಿ ಸಭೆ ನಡೆಸಿದ ಉಭಯ ನಾಯಕರು, ಮುಂದಿನ ಅಧಿವೇಶನ ತಯಾರಿ,



ಶ್ರೀನಿವಾಸಪುರ ವಿಧಾನಸಭಾ ಕ್ಷೇತ್ರದ ಅಭಿವೃದ್ಧಿ ಯೋಜನೆಗಳ ಕುರಿತಂತೆ ಚರ್ಚಿಸಿದರು ಎಂದು ತಿಳಿದುಬಂದಿದೆ. ಜುಲೈನಲ್ಲಿ ವಿಧಾನಮಂಡಲ ಅಧಿವೇಶನ ನಡೆಸಬೇಕಾಗಿದೆ. ಆ ಸಂದರ್ಭದಲ್ಲಿ ಹಾಗೂ ಎಷ್ಟು ದಿನ ಅಧಿವೇಶನ ನಡೆಸಬಹುದು ಎಂಬ ಬಗ್ಗೆಯೂ ಚರ್ಚೆ ನಡೆಸಲಾಗಿದೆ. 20 ದಿನಗಳ ಕಾಲ ಅಧಿವೇಶನ ನಡೆಸುವ ಬಗ್ಗೆ ಸಿಎಂ ಒಲವು ತೋರಿದ್ದು, ಸಚಿವ ಸಂಪುಟದಲ್ಲಿಯೂ ದಿನಾಂಕ ನಿಗದಿ ಅಧಿಕಾರವನ್ನು ಸಿಎಂಗೆ ನೀಡಿದೆ. ಮತ್ತೊಮ್ಮೆ ಸಂಪುಟದಲ್ಲಿ ಚರ್ಚಿಸಿ ದಿನಾಂಕ ನಿಗದಿ ಮಾಡಲಾಗುತ್ತದೆ.